


ಬಿಹಾರದ ರಾಜಗೀರ್‌ನಲ್ಲಿ ನಡೆದ ಏಷ್ಯಾ ಕಪ್ ಹಾಕಿ ಟೂರ್ನಿಯಲ್ಲಿ ಗೆಲುವಿನ ನಗೆ ಬೀರಿದ ತಂಡ

## ಟ್ರ್ಯಾಕ್ಟರ್ ಮತ್ತು ಹರ್ಮನ್

ಪಂಜಾಬಿನ ಅಮೃತಸರದ ಪುಟ್ಟ ಹಳ್ಳಿ ಜಂದಿಯಾಲ ಗುರು ಟೌನ್‌ಷಿಪ್. ಇಲ್ಲಿಯ ರೈತಾಪಿ ಕುಟುಂಬದಲ್ಲಿ ಜನಿಸಿದವರು ಹರ್ಮನ್. ಶಾಲೆ ಬಿಟ್ಟರೆ ಹೊಲದಲ್ಲಿ ಓಡಾಟ, ಕೆಲಸ ಕಾರ್ಯದಲ್ಲಿ ಮಗ್ನನಾಗಿರುತ್ತಿದ್ದವರು ಹರ್ಮನ್, ಅಪ್ಪ, ಸಹೋದರರೊಂದಿಗೆ ಕೃಷಿ ಕೆಲಸ ಮಾಡುತ್ತಿದ್ದರು. ಅಲ್ಲಿ ಅವರಿಗೆ ಅಚ್ಚುಮೆಚ್ಚಿನ ಕೆಲಸವೆಂದರೆ ಟ್ರ್ಯಾಕ್ಟರ್ ಚಾಲನೆ ಮಾಡುವುದು.

ಹದಿವಯಸ್ಸಿನಲ್ಲಿಯೇ ಟ್ರ್ಯಾಕ್ಟರ್ ಚಾಲನೆ ಕಲಿತರು. ಆದರೆ ಹಳೆಯ ಟ್ರ್ಯಾಕ್ಟರ್‌ನ ಗಿಯರ್ ಬಾಕ್ಸ್ ತುಕ್ಕು ಹಿಡಿದಿದ್ದರಿಂದ ಚಾಲನೆ ಸುಲಭವಾಗಿರಲಿಲ್ಲ. ಆದರೂ ಶಕ್ತಿ ಮೀರಿ ಗಿಯರ್ ಹಾಕುವುದನ್ನು ರೂಢಿಸಿಕೊಂಡರು. ಅದೇ ಅವರ ಮಣಿಕಟ್ಟು ಮತ್ತು ತೋಳಿನ ಶಕ್ತಿ ಹೆಚ್ಚಿಸಿರಬಹುದು.

2011ರಲ್ಲಿ ಜಲಂಧರ್‌ನಲ್ಲಿ ಅವರು ತಮಗಿಂತ ಹಿರಿಯ ಆಟಗಾರರು ಹಾಗೂ ಪೆನಾಲ್ಟಿ ಪರಿಣತರಾದ ಗಗನಪ್ರೀತ್ ಸಿಂಗ್ ಮತ್ತು ಸುಖಜೀತ್ ಸಿಂಗ್ ಅವರಿಂದ ತರಬೇತಿ ಪಡೆದರು. ಕಲಿಕೆಯಲ್ಲಿ ಚುರುಕಾಗಿದ್ದ ಹುಡುಗ ಜೂನಿಯರ್ ಹಂತದಿಂದಲೇ ಗಮನಸೆಳೆಯತೊಡಗಿದರು.

ಅವರ ಓಟದ ವೇಗ, ಹಾಕಿ ಸ್ಟಿಕ್ ನಿರ್ವಹಿಸುವ ಕಲೆ ಮತ್ತು ಚಾಕಚಕ್ಯತೆಯನ್ನು ಗುರುತಿಸಿದ ಕೋಚ್‌ಗಳು ತೂಕ ಹೆಚ್ಚಿರುವ ಚೆಂಡುಗಳನ್ನು ಆಡುವ ಅಭ್ಯಾಸವನ್ನು ಹರ್ಮನ್ ಅವರಿಗೆ ಮಾಡಿಸಿದರು. ಇದರಿಂದಾಗಿ ಅವರ ಸ್ಟ್ರೋಕ್‌ಗಳು ಶಕ್ತಿಯುತವಾದವು. ಭಾರತ ಜೂನಿಯರ್ ತಂಡದಲ್ಲಿ ಸ್ಥಾನ ಲಭಿಸಿತು. ‘ಇನ್ನೆರಡು ವರ್ಷಗಳಲ್ಲಿ ಹರ್ಮನ್ ಅವರು ವಿಶ್ವದ ಉತ್ತಮ ಡ್ರ್ಯಾಗ್‌ಫ್ಲಿಕ್ ಆಟಗಾರನಾಗುತ್ತಾನೆ’ ಎಂದು ಆಗಿನ ಜೂನಿಯರ್ ತಂಡದ ಕೋಚ್ ಹರೇಂದ್ರ ಸಿಂಗ್ ಹೇಳಿದ್ದರು. ಅವರ ಮಾತು ಹುಸಿಯಾಗಲಿಲ್ಲ.

2011ರ ಸುಲ್ತಾನ್ ಜೋಹರ್ ಕಪ್ ಜೂನಿಯರ್ ಟೂರ್ನಿಯಲ್ಲಿ ಹರ್ಮನ್ ಪದಾರ್ಪಣೆ ಮಾಡಿದರು. 2014ರಲ್ಲಿ ಸುಲ್ತಾನ್ ಜೋಹರ್ ಕಪ್ ಟೂರ್ನಿಯಲ್ಲಿ ಒಟ್ಟು 9 ಗೋಲು ಗಳಿಸಿದರು. ‘ಟೂರ್ನಿಯ ಶ್ರೇಷ್ಠ ಆಟಗಾರ’ ಪ್ರಶಸ್ತಿ ಮುಡಿಗೇರಿಸಿಕೊಂಡರು. 2015ರಲ್ಲಿ ಜೂನಿಯರ್ ಏಷ್ಯಾ ಕಪ್ ಟೂರ್ನಿಯಲ್ಲಿ ಒಟ್ಟು 14 ಗೋಲುಗಳನ್ನು ದಾಖಲಿಸಿದರು.

ನಿರಂತರವಾಗಿ ಉತ್ತಮ ಪ್ರದರ್ಶನ ತೋರಿದ ಹರ್ಮನ್ ಅವರಿಗೆ 2015ರಲ್ಲಿ ರಾಷ್ಟ್ರೀಯ ಸೀನಿಯರ್ ತಂಡದಲ್ಲಿ ಅವಕಾಶ ದೊರೆಯಿತು. ಅಲ್ಲಿಂದ ಮುಂದಿನದ್ದು ಇತಿಹಾಸ.

2016ರ ರಿಯೊ ಡಿ ಜನ್ಹೈರೊ ಒಲಿಂಪಿಕ್ ಕೂಟದಲ್ಲಿ ಆಡಿದ ತಂಡಕ್ಕೆ ಆಯ್ಕೆಯಾದರು. ಆದರೆ ಕೂಟದ ನಂತರ ಕಷ್ಟದ ದಿನಗಳನ್ನೂ ಎದುರಿಸಿದರು. ಅವರನ್ನು ಏಷ್ಯಾ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಿಂದ ಕೈಬಿಡಲಾಯಿತು. ಆದರೆ ಅದೇ ವರ್ಷ ಅವರು ಜೂನಿಯರ್ ವಿಶ್ವಕಪ್ ಗೆದ್ದ ಭಾರತ ತಂಡದಲ್ಲಿ ಮಿಂಚಿದರು. ಮತ್ತೆ ಸೀನಿಯರ್ ತಂಡಕ್ಕೆ ಮರಳಿದರು. ಎಫ್‌ಐಎಚ್ ಪ್ರೊ ಲೀಗ್‌ನಲ್ಲಿ ಅವರ ಅದ್ಭುತ ಪ್ರದರ್ಶನವು ಭಾರತ ತಂಡದ ಬಲವನ್ನು ಇಮ್ಮಡಿಗೊಳಿಸಿತು.

ಇದೀಗ 29 ವರ್ಷದ ಹರ್ಮನ್‌ಪ್ರೀತ್ ಅವರು ಏಷ್ಯನ್ ಪದಕ, ಎರಡು ಒಲಿಂಪಿಕ್ ಪದಕ, ಕಾಮನ್‌ವೆಲ್ತ್ ಪದಕಗಳನ್ನು ತಮ್ಮ ಕೊರಳಿಗೆ ಹಾಕಿಕೊಂಡಿದ್ದಾರೆ. ಅದರೊಂದಿಗೆ ವಿಶ್ವ ಕಿರೀಟವನ್ನು ಧರಿಸುವ ಛಲದಲ್ಲಿದ್ದಾರೆ.

